ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>ಆರ್.ಪಿ.ಸಂಖ್ಯೆ 57<br>ನಮೂನೆ ಸಂಖ್ಯೆ 4<br>(ಸಿವಿಲ್ ) |

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಬಳ್ಳಾಪುರ.**

ಎಸ್.ಸಿ. ಸಂಖ್ಯೆ: **111/2021**

| | |
|---|---|
| PW | 3 |
| CW | 8 |

ಸಾಕ್ಷಿಯನ್ನು ಕರೆಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **15.03.2024**

| | | |
|---|---|---|
| ಸಾಕ್ಷಿಯ ಹೆಸರು | : | ಚರಣ್ ರಾಜ್ |
| ತಂದೆಯ/ಗಂಡನ ಹೆಸರು | : | ಕರಿಯಪ್ಪ |
| ವಯಸ್ಸು | : | 19 ವರ್ಷ |
| ಉದ್ಯೋಗ | : | ಕಾರ್ಪೆಂಟರ್ |
| ವಾಸಸ್ಥಳ | : | ಗೌರಿಬಿದನೂರು |

ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ

1. ಮೃತ ವಿಶ್ವನಾಥ ಗೊತ್ತಿಲ್ಲ. ಚಾಸಾ -1 ರಿಂದ 5 ಗೊತ್ತಿಲ್ಲ. ಚಾಸಾ - 6 , 7 ಗೊತ್ತು. ಚಾಸಾ -8 ಗೊತ್ತಿಲ್ಲ. ಚಾಸಾ - 9 ಗೊತ್ತು. ಚಾಸಾ - 10 ರಿಂದ 15 ಗೊತ್ತಿಲ್ಲ. ನ್ಯಾಯಾಲಯದ ಕಂಪ್ಯೂಟರ್ ನಲ್ಲಿ ಕಾಣಿಸುವ 1 ರಿಂದ 3 ನೇ ಆರೋಪಿಗಳು ಗೊತ್ತಿಲ್ಲ. 4 ನೇ ಆರೋಪಿ ಗೊತ್ತಿಲ್ಲ.

2) ಎರಡು ವರ್ಷಗಳ ಹಿಂದೆ ರಾತ್ರಿ 9.30 ರಿಂದ 10.00 ಗಂಟೆ ಸಮಯದಲ್ಲಿ ಗೌರಿಬಿದನೂರಿನ ನದಿ ಗಡ್ಡೆಯಲ್ಲಿ ತಿಥಿ ಕಾರ್ಯಕ್ಕೆ ನಾನು , ಚಾಸಾ -6 , 7 , 9 ರವರು ಹೋಗಿದ್ದೆವು. ನಾವು ಊಟ ಮುಗಿಸಿ ಸೇತುವೆ ಮೇಲೆ ಕುಳಿತಿದ್ದೆವು. ರಾತ್ರಿ 1.00 ರಿಂದ 1.30 ರ ಸಮಯದಲ್ಲಿ ಅಗ 1 ಮತ್ತು 3 ನೇ ಆರೋಪಿಗಳು ಬೈಪಾಸ್ ಕಡೆಯಿಂದ ಬಂದರು. ಅಗ ಚಾಸಾ -6 ರವರು 1 ನೇ ಆರೋಪಿಯನ್ನು ಇಲ್ಲಿ ಯಾಕೆ

ಬಂದಿದ್ದೀರಿ ಎಂದು ದುಡ್ಡು ಕೇಳುತ್ತಿದ್ದರು. ಅಗ 1 ನೇ ಆರೋಪಿ ಈಗ ದುಡ್ಡು ಇಲ್ಲ ಕೊಡಲು ಆಗುವುದಿಲ್ಲ ಎಂದು ಹೇಳಿದ ,ನಂತರ ಕೊಡುತ್ತೇನೆ ಎಂದು ಹೇಳಿದ . ನಿಮ್ಮದು ದೊಡ್ಡಬಳ್ಳಾಪುರ ಇಲ್ಲಿ ನಿಮಗೆ ಏನು ಕೆಲಸ ಎಂದು ಅವರನ್ನು ಚಾಸಾ -6 ಬೈದು ಕಳುಹಿಸಿದರು. ನಂತರ ನಾವು ಹೊರಟು ಹೋದೆವು.

3) ವಿಶ್ವನಾಥ ಹೇಗೆ ,ಎಲ್ಲಿ ತೀರಿಕೊಂಡ ನನಗೆ ಗೊತ್ತಿಲ್ಲ. ಅವರ ಸಾವಿಗೆ ಯಾರು ಕಾರಣ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**.)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

**4)** ಅ ಸಮಯದಲ್ಲಿ ಮನೋಜ , ಮುನಿರಾಜು ರವರ ಬಳಿ ಬಂದು ದ್ವಿಚಕ್ರ ವಾಹನ ಕೊಡುವಂತೆ ಕೇಳಿದ ಎಂದರೆ ಸ ರಿಯಲ್ಲ. ನಂತರ ಮುನಿರಾಜು ಪೆಟ್ರೋಲ್ ಕಡಿಮೆ ಇದೆ ಎಂದು ಹೇಳಿದರೂ ಸಹಾ ಕೇಳದೆ ವಾಹನವನ್ನು ತೆಗೆದುಕೊಂಡು ಅಲ್ಲಿಂದ ನನ್ನನ್ನು ಹಾಗೂ ಶ್ರೀಕಾಂತನನ್ನು ಸದರಿ ದ್ವಿಚಕ್ರ ವಾಹನದಲ್ಲಿ ಕೂರಿಸಿಕೊಂಡು ಬೈಪಾಸ್ ರಸ್ತೆಯ ನರ್ಸಿಂಗ್ ಕಾಲೇಜು ಮುಂಭಾಗದಲ್ಲಿರುವ ಹೊಸಬಡಾವಣೆಯ ಒಂಟಿ ಮನೆಯ ಸಮೀಪಕ್ಕೆ ಕರೆದುಕೊಂಡು ಹೋದ ಎಂದರೆ ಸರಿಯಲ್ಲ. ಅಗ ಒಬ್ಬ ಗಂಡಸು ಅಳುವ ಶಬ್ದ ಕೇಳಿಸಿತು ಎಂದರೆ ಸರಿಯಲ್ಲ. ನಂತರ ಮನೋಜ ಮತ್ತು ಶ್ರೀಕಾಂತ ಬಂದಾಗ ಅಳುವ ಶಬ್ದದ ಬಗ್ಗೆ ತಿಳಿಸಿದೆ ಅದಕ್ಕೆ ಅವರು ಅದೆಲ್ಲಾ ನಿನಗೆ ಯಾಕೆ ಬಾರೋ ಎಂದು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ದಿಃ 06.07.2021 ರಂದು ನಾನು , ಮನೋಜಾ , ಶ್ರೀಕಾಂತ , ಅಜರ್ , ಪ್ರಶಾಂತ್ ಸೇರಿ ಬೊಂಬು ಡಾಬಾ ದಲ್ಲಿ ಕುಳಿತಿದ್ದಾಗ ದಿಃ 04.07.2021 ರಂದು ಮನೋಜ ಮತ್ತು ಶೀಕಾಂತ , ಅಕಾಶ್ ಹಾಗೂ ಮಂಜುನಾಥ ರವರೊಂದಿಗೆ ಬಂದಿದ್ದು , ಅ ದಿನ ಶಿಕ್ಷಕ ಎನ್ ವಿಶ್ವನಾಥ ಕೊಲೆಯಾಗಿದ್ದರ ಬಗ್ಗೆ ವಿಚಾರಿಸಿದಾಗ ಮನೋಜ ಮತ್ತು ಶ್ರೀಕಾಂತ ಬೇವತು ನಮಗೆ

PW: 3 CW:8

ಗೊತ್ತಿಲ್ಲ ಎಂದು ಗಾಬರಿಯಿಂದ ದ್ವಿಚಕ್ರ ವಾಹನದಲ್ಲಿ ಹೊರಟು ಹೋದರು ಎಂದರೆ ಸರಿಯಲ್ಲ.

**5)** ನಾನು ಈಗ ಓದಿ ಹೇಳಿದಂತೆ '' ಅ ಸಮಯದಲ್ಲಿ ಬೈಪಾಸ್ ರಸ್ತೆಯ ಕಡೆಯಿಂದ ಸಂತೆ ಮೈದಾನದ ಮನೋಜ್ ನು ಬಂದು ಮುನಿರಾಜು ರವರ ಬಳಿ ಇದ್ದ ............................................................................................................................................................................,.........................................................................................ಪ್ರಶಾಂತನಿಗೆ ಕೊಟ್ಟಿದ್ದ ದ್ವಿಚಕ್ರ ವಾಹನವನ್ನು ಮನೋಜನು ತೆಗೆದುಕೊಂಡು ಶ್ರೀಕಾಂತನೊಂದಿಗೆ ಹೊರಟು ಹೋದನು. " ಎಂದು ಈಗ ಓದಿ ಹೇಳಿದ ರೀತಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ **- 3** ಎಂದು ಗುರುತಿಸಲಾಯಿತು.

**6)** ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನಾನು ನಿಪಿ - 3 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು **:** ಶ್ರೀ**.**ಎಂ**.** ಎಸ್ **.** ಆರ್ ವಕೀಲರಿಂದ**,** ಆರೋಪಿ**/** ತರ ಪರವಾಗಿಃ

**7)** ಏನೂ ಇಲ್ಲಾ.

ಮರುವಿಚಾರಣೆಃ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 15.03.2024 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

**ಸಹಿ/-**

ಮೂರನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

PW: 3 CW:8

PW: 3 CW:8